# ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ

## ಸಿ. ಸಿ. ನಂ: 281/2019

ಪಿ.ಡಬ್ಲ್ಯೂ- 9
ಸಿ.ಡಬ್ಲೂ- 10

ಹೆಸರು :- ಯಲ್ಲಪ್ಪ ಗಿರಿಯಪ್ಪನವರ

ತಂದೆ / ಗಂಡನ ಹೆಸರು :- ದ್ಯಾಮಪ್ಪ

ವಯಾ :- 53 ವರ್ಷ

ಉದ್ಯೋಗ :- ಮುಖ್ಯ ಪೇದೆ

ವಾಸಸ್ಥಳ :- ಗುಡಿಗೇರಿ, ಕುಂದಗೋಳ

ಸತ್ಯ ಪ್ರತಿಜ್ಞೆ ಮೇರೆಗೆ - ದಿನಾಂಕ: 17-02-2026

***ಮುಖ್ಯ ವಿಚಾರಣೆ :- ಶ್ರೀ ಸ.ಸ.ಅ. ರವರಿಂದ :***

ನಾನು 2017 ರಿಂದ 2022 ರವರಿಗೆ ನವಲಗುಂದ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿರುತ್ತೇನೆ.

1) ದಿನಾಂಕ 04-11-2018 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ ಸುಮಾರು 10-45 ಗಂಟೆಗೆ ನವಲಗುಂದ ಸರ್ಕಾರಿ ಆಸ್ಪತ್ರೆಯಿಂದ ಜಗಳದಲ್ಲಿ ಗಾಯವಾಗಿ ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆದೂರವಾಣಿ ಕರೆ ಬಂದಿದ್ದು, ನಾನು ತಕ್ಷಣ ಆಸ್ಪತ್ರೆಗೆ ಬೇಟಿ ನೀಡಿ ಅಲ್ಲಿ ಗಾಯಾಳುವಿನ ಹೆಸರು ಬಸಪ್ಪ ಸೂರಿನ ಎಂದು ತಿಳಿದು ಬಂದಿರುತ್ತದೆ. ವೈದ್ಯಾಧಿಕಾರಿಗಳಲ್ಲಿ ನೊಂದವರು ಹೇಳಿಕೆ ನೀಡುವ ಸ್ಥಿತಿಯಲ್ಲಿದ್ದ ಬಗ್ಗೆ ಕೇಳಲಾಗಿ ಸದರಿಯವರು ನೊಂದವರು ಹೇಳಿಕೆ ನೀಡುವ ಸ್ಥಿತಿಯಲ್ಲಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

2) ನೋಂದವರನ್ನು ಹುಬ್ಬಳ್ಳಿಯ ಕೀಮ್ಸ್ ಆಸ್ಪತ್ರೆಗೆ ಕಳುಹಿಸಿದ ಬಗ್ಗೆ ತಿಳಿದು ಬಂದಿರುತ್ತದೆ ದಿನಾಂಕ 09-11-2018 ರಂದು ಹುಬ್ಬಳ್ಳಿ ಕೀಮ್ಸ್ ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತಾರೆ. ನಂತರ ದಿನಾಂಕ 10-11-2018 ರಂದು ನವಲಗುಂದ ಸರ್ಕಾರಿ ಆಸ್ಪತ್ರೆಗೆ ಪುನಃ ದಾಖಲಾಗಿರುತ್ತಾರೆ. ಅದೇ ದಿನ ಚಾಸಾ-1 ರವರು ನವಲಗುಂದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಮಾಹಿತಿ ನೀಡಿದ್ದು, ಅದನ್ನು ಸ್ವೀಕರಿಸಿಕೊಂಡು ನಮ್ಮ ಠಾಣೆಯ ಅಪರಾಧ ಸಂಖ್ಯೆ 172/2018 ರಂತೆ ಕಲಂ 324, 326, 504, 506 ಸ.ಕಲಂ 34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿದ್ದು ಸದರಿ ಪ್ರ.ವ.ವ.ನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರ.ವ.ವ. ನ್ನು ಈಗ ನೋಡುತ್ತಿದ್ದು ಅದನ್ನು **ನಿ.ಪಿ.9** ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ ಪ್ರಥಮ ಮಾಹಿತಿಯು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು.

3) ನಂತರ ಮಾರನೇ ದಿನ ಅಂದರೆ ದಿನಾಂಕ 11-11-2018 ರಂದು ಘಟನಾ ಸ್ಥಳವಾದ ತಿರಲಾಪುರ ಗ್ರಾಮಕ್ಕೆ ಬೇಟಿ ನೀಡಿ ಚಾಸಾ-1 ರವರ ಮನೆಯ ಬಳಿ ಹೋಗಿ ಚಾಸಾ-1 ರವರು ತೋರಿಸಿದ ಸ್ಥಳದ ಪಂಚನಾಮೆಯನ್ನು ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮದಲ್ಲಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಛಾಯಾಚಿತ್ರವನ್ನು ತೆಗೆದಿದ್ದು, ಅದು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿರುತ್ತದೆ. ಪಂಚನಾಮೆ ಕಾಲಕ್ಕೆ ಚಾಸಾ-1 ರವರು ತೋರಿಸಿದ ಎರಡೂ ಬಡಿಗೆ ಹಾಗೂ ಒಂದು ಕಬ್ಬಿಣದ ರಾಡನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡಿರುತ್ತೇನೆ. ಸದರಿ ರಾಡ ಹಾಗೂ ಎರಡೂ ಬಡಿಗೆಗಳು ನ್ಯಾಯಾಲಯದ ಮುಂದೆ ಇದ್ದು ಅವುಗಳು ಈಗಾಗಲೇ ಮು.ಮಾ.1 ರಿಂದ ಮು.ಮಾ.3 ಎಂದು ಗುರುತಿಸಲಾಗಿರುತ್ತದೆ.

4) ಆನಂತರ ಅದೇ ದಿನ ಸಾಕ್ಷಿದಾರರಾದ ಚಾಸಾ-4 ರಿಂದ ಚಾಸಾ-7 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಸದರಿಯವರ ಹೇಳಿಕೆಯು ಈಗಾಗಲೇ ಕ್ರಮವಾಗಿ ನಿಪಿ-5, ನಿಪಿ-6, ನಿಪಿ-4 ಎಂದು ಗುರುತಿಸಲಾಗಿದ್ದು, ಚಾಸಾ-5 ರವರ ಹೇಳಿಕೆಯನ್ನು **ನಿ.ಪಿ.10** ಎಂದು ಗುರುತಿಸಲಾಯಿತು. ಅದೇ ದಿನ ಮುದ್ದೆ ಮಾಲುಗಳನ್ನು ಸ್ವತ್ತು ಪಟ್ಟಿಗೆ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ

ನಿವೇದಿಸಿಕೊಂಡಿರುತ್ತೇನೆ. ಸದರಿ ಸ್ವತ್ತು ಪಟ್ಟಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.**11** ಎಂದು ಗುರುತಿಸಲಾಯಿತು.

5) ದಿನಾಂಕ 14-11-2018 ರಂದು ಪ್ರಕರಣದ 1 ಮತ್ತು 2 ನೇ ಆರೋಪಿತರನ್ನು ಠಾಣೆಗೆ ಕರೆಯಿಸಿ, ದಸ್ತಗಿರಿ ನಿಯಮ ಪಾಲಿಸಿ ಅವರನ್ನು ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ಸದರಿ ವರದಿಗಳನ್ನು ಕ್ರಮವಾಗಿ ನಿ.ಪಿ.**12** ರಿಂದ ನಿ.ಪಿ.**15** ಎಂದು ಗುರುತಿಸಲಾಯಿತು.

6) ಪ್ರಕರಣದ 5 ನೇ ಆರೋಪಿತಳಿಗೆ ಕಲಂ 41 ಎ ರಡಿಯಲ್ಲಿ ನೋಟಿಸ ಜಾರಿ ಮಾಡಿರುತ್ತೇನೆ. ಸದರಿ ನೋಟಿಸನ್ನು ನಿ.ಪಿ.**16** ಎಂದು ಗುರುತಿಸಲಾಯಿತು. ಪ್ರಕರಣದ 3 ನೇ ಆರೋಪಿತನಾದ ಈರಪ್ಪನ ವಿರುದ್ಧ ಯಾವುದೇ ಸಾಕ್ಷ್ಯದಾರಗಳು ಲಬ್ಯವಿರದೇ ಇದ್ದ ಕಾರಣ ಆತನನ್ನು ಕೈಬಿಟ್ಟಿರುತ್ತೇನೆ.

7) ಆನಂತರ ದಿನಾಂಕ 14-01-2019 ರಂದು ಚಾಸಾ-8 ಮತ್ತು ಚಾಸಾ-9 ರವರಿಂದ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಪ್ರಮಾಣ ಪತ್ರಗಳು ಈಗಾಗಲೇ ನಿಪಿ-7 ಮತ್ತು ನಿಪಿ-8 ಎಂದು ಗುರುತಿಸಲಾಗಿರುತ್ತದೆ.

8) ಆನಂತರ ಅದೇ ದಿನ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷ್ಯದಾರ ಲಬ್ಯವಿದ್ದ ಕಾರಣ ಆರೋಪಿತರ ವಿರುದ್ದ ದೋಷರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ಸದರಿ ದೋಷರೋಪಣ ಪಟ್ಟಿಯನ್ನು ನಿ.ಪಿ.**17** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.17(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಎದುರು ಹಾಜರಿದ್ದ 4 ನೇ ಆರೋಪಿಯನ್ನು ನೋಡಿ ಗುರುತು ಮಾಡುತ್ತಾರೆ. ಉಳಿದ ಆರೋಪಿತರನ್ನು ನೋಡಿದರೆ ಗುರುತು ಮಾಡುತ್ತೇನೆ. (ಈ ಹಂತದಲ್ಲಿ ನ್ಯಾಯಾಲಯದದ ಮುಂದೆ ಉಳಿದ ಆರೋಪಿತರು ಗೈರು ಹಾಜರಿದ್ದು, ಆರೋಪಿತರ ಗುರುತಿಗೆ ಯಾವುದೇ ತಕರಾರು ಇಲ್ಲಾ ಎಂದು ಅರ್ಜಿ ಸಲ್ಲಿಸಿರುತ್ತಾರೆ).

ಪಾಟೀಸವಾಲು ಃ ಶ್ರೀ ಪಿ ಹೆಚ್ ಕೆ ವಕೀಲರಿಂದ ಃ -

1) ಘಟನೆಯು ದಿನಾಂಕ 04-11-2018 ರಂದು ನಡೆದಿರುತ್ತದೆ. ಅಂದು ಯಾವುದೇ ಹೇಳಿಕೆ ಹಾಗೂ ದೂರು ಪಡೆದುಕೊಂಡಿಲ್ಲ ಕಾರಣ ಅವರು ಹೇಳಿಕೆ ನೀಡುವ ಸ್ಥಿತಿಯಲ್ಲಿ ಇರಲಿಲ್ಲ.

ಗಾಯಾಳುವಿನ ಸಂಗಡ ಅವರ ಸಂಬಂಧಿಕರು ಇದ್ದರು. ಅವರ ಹೇಳಿಕೆ ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಆದರೆ ಅವರು ನೀಡಿಲ್ಲ.

2) ನೊಂದವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-1 ರವರು ಠಾಣೆಗೆ ಬಂದು ದೂರು ನೀಡಿಲ್ಲ. ದೂರು ನೀಡಿದ ದಿನದಂದು ಚಾಸಾ-1 ರವರು ಮಾತನಾಡುವ ಸ್ಥಿತಿಯಲ್ಲಿ ಇದ್ದರು. ಅಂದು ಚಾಸಾ-1 ರವರು ಆಸ್ಪತ್ರೆಯಲ್ಲಿ ದಾಖಲು ಆಗಿರುವುದಿಲ್ಲ ಆದರೆ ಸಂದರ್ಶನಕ್ಕೆ ಬಂದಿರುತ್ತಾರೆ.

3) ಪ್ರಥಮ ಮಾಹಿತಿಯನ್ನು ಬರೆಯಲು ಚಾಸಾ-1 ರವರ ಸಂಬಂಧಿಕರು ಮಾಹಿತಿ ನೀಡಿರುತ್ತಾರೆ ಅವರ ಹೆಸರು ಗೊತ್ತಿಲ್ಲ. ನಾನು ಚಾಸಾ-1 ರವರ ಮಾತನ್ನು ಕೇಳಿ ಅವರಿಗೆ ಸಹಾಯವಾಗಲಿ ಎಂದು ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ಸಾಕ್ಷ್ಯದಾರಗಳನ್ನು ಹಾಗೂ ಹೇಳಿಕೆಗಳನ್ನು ಪಡೆದು, ಸುಳ್ಳು ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ.

4) ಮು.ಮಾಲುಗಳಂತಹ ವಸ್ತುಗಳು ಸಾಮಾನ್ಯವಾಗಿ ಹಳ್ಳಿಗಳಲ್ಲಿ ಎಲ್ಲಾ ಮನೆಗಳಲ್ಲಿ ಲಭ್ಯವಿರುತ್ತದೆ ಎಂದರೆ ಸರಿ. ನಾನು ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ನಾನು ಚಾಸಾ-1 ರವರ ಸುಳ್ಳು ಸಂಗತಿಗಳಿಗೆ ಅನುಕೂಲವಾಗುವಂತೆ ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ.

(ನವೀನ ಎಫ್. ಡಿಸೋಜಾ)
ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.
ನವಲಗುಂದ.